TGMC BANK

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೊ–ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ ಬಿ ಹೆಚ್ ರಸ್ತೆ, ತುಮಕೂರು – 572103. ದೂರವಾಣಿ : 0816-4021102/ 03/ 04, ಫ್ಯಾಕ್ಸ್ : 0816-2255905

ರಾಜಾಜಿನಗರ ಶಾಖೆ: 2ನೇ ಕ್ರಾಸ್, ESI ರಸ್ತೆ, 4ನೇ ಹಚಿತ, ರಾಜಾಜಿನಗರ, ಬೆಂಗಳೂರು– 5600010, ದೂ.080–41615591

ಇ-ಮೈಲ್: tgmc.ho@tgmcbank.com, Website: www.tgmcbank.com

## ಪ್ರಕಟಣೆ

ದಿನಾಂಕ:– 02/06/2018

ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., ತುಮಕೂರು, ಇಲ್ಲಿ ಖಾಲಿಯಿರುವ ಕೆಳಕಂಡ ಹುದ್ದೆಗಳನ್ನು ಭರ್ತಿಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗಧಿತ ಅರ್ಜಿ ನಮೂನೆಗಳು ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ಮತ್ತು ಬೆಂಗಳೂರಿನ ರಾಜಾಜಿನಗರ ಶಾಖೆಯಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ದಿನಾಂಕ: 06/06/2018 ರಿಂದ 18/06/2018 ರವರೆಗೆ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ನೀಡಲಾಗುವುದು, ಬ್ಯಾಂಕಿನ ಹೆಸರಿನಲ್ಲಿ ರೂ 100/– ಮೊತ್ತದ ಡಿಡಿಯನ್ನು ಸಲ್ಲಿಸಿ ಅರ್ಜಿ ನಮೂನೆಯನ್ನು ಪಡೆಯಬಹುದು.

| ಕ್ರ ಸಂ | ಹುದ್ದೆಯ ಹೆಸರು | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|---|
| 1 | ಕಿರಿಯ ಸಹಾಯಕರು | ರೂ.20000–500–21000–600–24600–700–28800–800– 33600–900–36300 | 26 |
| 2 | ಅಟೆಂಡರ್/ ಚಾಲಕರು | ರೂ.14550–350–15600–400–17200–450–19000–500–21000–600–24600–700–26700 | 4 |

### ವಿದ್ಯಾರ್ಹತೆ:

1. ಕಿರಿಯ ಸಹಾಯಕರು: ಪದವಿ ಪೂರ್ವ ಶಿಕ್ಷಣ (PUC) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.
   1. ಪದವಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.
   2. ಕನ್ನಡ ಓದುವ, ಬರೆಯುವ, ಅರ್ಥೈಸಿಕೊಳ್ಳುವ ಸಾಮರ್ಥ್ಯ ಹೊಂದಿರಬೇಕು ಹಾಗೂ ಕನ್ನಡ ಭಾಷೆಯನ್ನು ನಿರರ್ಗಳವಾಗಿ ಮಾತನಾಡಬೇಕು.
   3. ಗಣಕಯಂತ್ರ ನಿರ್ವಹಣೆ (Computer Operation) ಜ್ಞಾನ ಹೊಂದಿರಬೇಕು.

2. ಅಟೆಂಡರ್/ಚಾಲಕರು: ಕನ್ನಡವನ್ನು ಭಾಷೆಯನ್ನಾಗಿ ಅಭ್ಯಸಿಸಿ, ಎಸ್ಎಸ್ಎಲ್ಸಿ ಯಲ್ಲಿ ತೇರ್ಗಡೆಯಾಗಿರಬೇಕು. ಸಿಂಧುತ್ವವುಳ್ಳ ಕಾರು ವಾಹನ ಚಾಲನಾ ಪರವಾನಿಗಿ ಹೊಂದಿರತಕ್ಕದ್ದು.

### ಸೂಚನೆಗಳು:–

1. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22/06/2018.
2. ವಯೋಮಿತಿ: ಪ್ರಕಟಣೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳು ತುಂಬಿರಬೇಕು.
3. ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡ ಹಾಗೂ ಪ್ರವರ್ಗ–1 ಕ್ಕೆ ಸೇರುವ ವ್ಯಕ್ತಿಗಳಿಗೆ– ಗರಿಷ್ಠ 40 ವರ್ಷಗಳು, ಇತರೆ ಹಿಂದುಳಿದ ವರ್ಗಕ್ಕೆ ಸೇರಿದವರಿಗೆ– ಗರಿಷ್ಠ 38 ವರ್ಷಗಳು. ಇತರೆ ಎಲ್ಲಾ ವರ್ಗದವರಿಗೆ ಗರಿಷ್ಠ 35 ವರ್ಷಗಳು. ಈ ವಯೋಮಿತಿಯು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾದ 22/06/2018ಕ್ಕೆ ಆಧಾರಿತವಾಗಿದೆ.
4. ವಯೋಮಿತಿಗೆ ಸಂಭಂದಿಸಿದಂತೆ ಸಿಂಧುತ್ವವುಳ್ಳ ಸಕ್ಷಮ ಪ್ರಾಧಿಕಾರವು ನೀಡಿರುವ ಜಾತಿ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.
5. ನಿಗಧಿತ ಅರ್ಜಿಯನ್ನು ಪತ್ರಾಂಕಿತ ಅಧಿಕಾರಿ (Gazetted Officer) ರವರಿಂದ ದೃಢೀಕರಿಸಿದ ಅಗತ್ಯ ಪೂರಕ ದಾಖಲೆಗಳೊಂದಿಗೆ (ಅಂಕಪಟ್ಟಿ, ಪ್ರಮಾಣ ಪತ್ರ ಇತ್ಯಾದಿ) ಸಲ್ಲಿಸಬೇಕು.
6. ಕಿರಿಯ ಸಹಾಯಕರ ಹುದ್ದೆಗೆ ಅರ್ಜಿ ಸಲ್ಲಿಸುವವರು ರೂ.1000–00 ಮೊತ್ತದ ಡಿ ಡಿ ಹಾಗೂ ಅಟೆಂಡರ್/ಚಾಲಕರ ಹುದ್ದೆಗೆ ಅರ್ಜಿ ಸಲ್ಲಿಸುವವರು ರೂ.500–00 ಮೊತ್ತದ ಡಿ ಡಿ ಯನ್ನು "ತುಮಕೂರು ಗ್ರೈನ್ ಮರ್ಚೆಂಟ್ಸ್ ಕೊ–ಆಪರೇಟಿವ್ ಬ್ಯಾಂಕ್ ಲಿ.," ಹೆಸರಿಗೆ ಪಡೆದು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.
7. ಅಟೆಂಡರ್/ಚಾಲಕರ ಹುದ್ದೆಗೆ ಅರ್ಜಿಸಲ್ಲಿಸುವವರು ವಾಹನ ಚಾಲನಾ ಅನುಭವ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.
8. ಭರ್ತಿ ಮಾಡಿದ ಅರ್ಜಿಗಳನ್ನು ಬ್ಯಾಂಕಿನ ಆಡಳಿತ ಕಛೇರಿಗೆ ಅಂಚೆ ಅಥವಾ ಕೊರಿಯರ್ ಮೂಲಕ ಮಾತ್ರ ದಿನಾಂಕ 22/06/2018 ರೊಳಗಾಗಿ ತಲುಪಿಸತಕ್ಕದ್ದು.
9. ನೇಮಕಾತಿ ಹಕ್ಕನ್ನು ಕಾಯ್ದಿರಿಸಿದೆ.

**ಆಯ್ಕೆ ವಿಧಾನ:-**

**ಕಿರಿಯ ಸಹಾಯಕರು ಹುದ್ದೆಗೆ** ಸ್ಪರ್ಧಾತ್ಮಕ ಪರೀಕ್ಷೆ ಏರ್ಪಡಿಸಲಾಗುವುದು, ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಅಭ್ಯರ್ಥಿಯನ್ನು 1:5ರ ಅನುಪಾತದಲ್ಲಿ ಮೌಖಿಕ ಸಂದರ್ಶನ ನಡೆಸಿ ಆಯ್ಕೆ ಮಾಡಲಾಗುವುದು.

**ಅಟೆಂಡರ್/ಚಾಲಕರ ಹುದ್ದೆಗೆ** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು 1:5ರ ಅನುಪಾತದಲ್ಲಿ ಆಯ್ಕೆ ಮಾಡಿ ಮೌಖಿಕ ಸಂದರ್ಶನ ನಡೆಸಿ ಮತ್ತು ಕಾರು ಚಾಲನಾ ಸಾಮರ್ಥ್ಯವನ್ನು ಪರಿಶೀಲಿಸಿ ಆಯ್ಕೆ ಮಾಡಲಾಗುವುದು.

**ಅರ್ಜಿ ನಮೂನೆಗಳು ದೊರೆಯುವ ಸ್ಥಳ**

1. **ತುಮಕೂರು ಗ್ರೈನ್ ಮರ್ಚೆಂಟ್ಸ್ ಕೊ-ಆಪರೇಟಿವ್ ಬ್ಯಾಂಕ್ ಲಿ.,**
   ಆಡಳಿತ ಕಛೇರಿ
   ಬಿ ಹೆಚ್ ರಸ್ತೆ,
   ತುಮಕೂರು – 572103.
   ದೂರವಾಣಿ : 0816-4021102/ 03

2. **ತುಮಕೂರು ಗ್ರೈನ್ ಮರ್ಚೆಂಟ್ಸ್ ಕೊ-ಆಪರೇಟಿವ್ ಬ್ಯಾಂಕ್ ಲಿ.,**
   ರಾಜಾಜಿನಗರ ಶಾಖೆ:
   2ನೇ ಕ್ರಾಸ್, **ESI** ರಸ್ತೆ, 4ನೇ ಹಂತ, ರಾಜಾಜಿನಗರ,
   ಬೆಂಗಳೂರು- 5600010, ದೂ.080-41615591

ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ ಬ್ಯಾಂಕಿನ ಪ್ರಧಾನ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ಅರ್ಜಿಯೊಂದಿಗೆ ಅಗತ್ಯ ಮಾಹಿತಿಯನ್ನು ಪ್ರಕಟಣೆಯಲ್ಲಿ ತಿಳಿಸಿರುವಂತೆ ಸಲ್ಲಿಸದಿದ್ದಲ್ಲಿ, ಅಪೂರ್ಣ ಅಥವಾ ಅಸತ್ಯ ಮಾಹಿತಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಸಿಬ್ಬಂದಿ ನೇಮಕಾತಿ ಸಮಿತಿಯ ಆದೇಶದ ಮೇರೆಗೆ

ಸಹಿ/-

ಮುಖ್ಯ ಕಾರ್ಯನಿರ್ವಾಹಕರು / ಸದಸ್ಯ ಕಾರ್ಯದರ್ಶಿ

ತುಮಕೂರು ಗ್ರೈನ್ ಮರ್ಚೆಂಟ್ಸ್ ಕೊ-ಆಪರೇಟಿವ್ ಬ್ಯಾಂಕ್ ಲಿ., ತುಮಕೂರು.